ಅಂಚೇ ಇಲಾಖಾ.

ನಂ. 15. ತಾರೀಖು 10ನೇ ಏಪ್ರೆಲ್ 1884.

ಬೊಂಬೈ ಪೋಸ್ಟ್‌ಮಾಸ್ಟರ್ ಜನರಲ್‌ಯವರಿಂದ ಬಂದ ಇದರಡಿ ಕಂಡ ಇಂಡ್ಯ ಗವರ್ನ್‌ಮೆಂಟಿನಿಂದ ಕೊಡೋಣಾದ ಇಸ್ತಿಹಾರ್‌ನಾಮೆಯು ಸಮಸ್ತ ಜನಗಳ ತಿಳವಳಿಕೆಬಗ್ಯೆ ಫಾಯಿಸ್ ಮಾಡಲ್ಪಟ್ಟಿದೆ:—

ಇಸ್ತಿಹಾರ್‌ನಾಮೆ ನಂಬರ್ 18, ಸಿಂಲಾ, 28ನೇ ಮಾರ್ಚಿ 1884.

ಸ್ ೯ 1866ನೇ ಇಸವಿ 14ನೇ ನಂಬರ್ ಆಕ್ಟಿನ 63ನೇ ಸೆಕ್ಷನಿಂದ ಕೊಡೋಣಾದ ಅಧಿಕಾರವನ್ನು ಚಲಾಯಿಸುವದರಲ್ಲಿ ಮಂತ್ರಾಲೋಚಕ ಸಮಾಜದೊಳಗಣ ಗವರ್ನರ್ ಜನರಲ್ ಸಾಹೆಬರವರು, ಇಂಡ್ಲಾಂಡ್ ರಿಜ್ಲೈಯಾನೆ ಜವಾಬ್‌ಪೋಸ್ಟ್‌ಕಾರ್ಡಿನ ಮೊದಲನೆ ಭಾಗವು ಅದಕ್ಕೆ ಲಗ್ಗತ್ತಾದ ಯರಡನೆ ಅಥವಾ ಜವಾಬ್‌ಬರಿಯತಕ್ಕ ಭಾಗದೊಡನೆ ರವಾನಿಸಲ್ಪಡತಕ್ಕದ್ದೆಂತಲೂ, ಈ ನಿಯಮವು ಅತಿಕ್ರಮಿಸಲ್ಪಟ್ಟರೆ ಪೋಸ್ಟ್‌ಕಾರ್ಡಿನ ಮೊದಲನೇ ಭಾಗವನ್ನ ಪಾವತಿಮಾಡುವಾಗ ಅರ್ಧಆಣೆ ಹಾಸಲ್ ವಸೂಲ್ ಮಾಡತಕ್ಕದ್ದೆಂತಲೂ ವಿಧಿಸುತ್ತಾರೆ.

ಬಿ. ಮರಿಗಂಗಯ್ಯ,
ಅಂಚೇ ಬಕ್ಷಿ.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 1ನೇ ಏಪ್ರೆಲ್ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸ್ ೯ 1884—85ನೇ ಇಸವಿ ತಾರಣ ಸಂವತ್ಸರಕ್ಕೆ ಕೋಲಾರ ಡಿಸ್ಟ್ರಿಕ್ಟು ಚಿಂತಾಮಣಿ ತಾಲ್ಲೂಕಿನ ಬಾಬುತು ಅರಗು ಮತ್ತು ಕುರಂಗದ ಕಲ್ಲುಗಳ ಇಜಾರೆ ಪ್ರತ್ಯೇಕ ಪ್ರತ್ಯೇಕವಾಗಿ ಆ ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್‌ರವರ ರೂಬರೂ ಸ್ ೯ 1884ನೇ ಇಸವಿ ಏಪ್ರಲ್ ತಾರೀಖು 21ರಲ್ಲು ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ, ಆ ತಾರೀಖಿಗೆ ಸರಿಯಾಗಿ ಇಚ್ಛೈವುಳ್ಳವರು ಆಮಿಾಲರ ರೂಬರೂ ಹಾಜರಾಗಿ ಪೋಟೂಪೋಟಿ ಮಾಡಬಹುದು. ಈ ಹರಾಜು ಸದರೀ ತಾರೀಖು ದಿವಿ 11 ಘಂಟೆ ಲಾಗಾಯತು ಸಾಯಿಂಕಾಲ 5 ಘಂಟೆ ವರಿಗೆ ನಡಿಸಲ್ಪಡುವದು. ಈ ಹರಾಜು ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ ಸ್ಟಾಹೇಬರವರ ಮಂಜೂರಾತಿಗೆ ವಳಪಟ್ಟು ಇರುತ್ತೆ.

ಹರಾಜು ಪೂರೈಸಿದ ವಡನೆ ಛಡಸವಾಲ್‌ದಾರನು ಹರಾಜು ಮೊಬಲಗಿಗೆ ಶೇಕಡಾ 25 ರೂಪಾಯಿಮೇರಿಗೆ ಶೇವಣಿ ಇಡಬೇಕು. ಡೆಪುಟಿ ಕಮ್ಮಿಷನರ್ ಸಾಹೇಬರವರಿಂದ ಮಂಜೂರ್ಮಾಡಲ್ಪಟ್ಟ ಸಂಗತಿ ಅವನಿಗೆ ತಿಳಿಸಲ್ಪಟ್ಟ ವಡನೆ ಬಾಕಿ ಮೊಬಲಗನ್ನು ಹರಾಜ್ ಮೊಬಲಗಿಗೆ ರೂಪಾಯಿ ವಂದಕ್ಕೆ ವಂದಾಣೆ ಮೇರಿಗೆ ಲೋಕಲ್ ಸೆಸ್ ಸಹಿತ ಪಾವತಿ ಮಾಡಬೇಕು. ಅಥವಾ ಅಮಲ್ದಾರರಿಂದ ಮೊಕರರ್ ಮಾಡಲ್ಪಡುವ ಖಿಸ್ತುಗಳ ಪ್ರಕಾರ ಪಾವತೀ ಮಾಡಲು ಬದ್ಧನಾಗಿ ಕ್ರಮಪ್ರಕಾರ ಮುಚ್ಚಳಿಕೆಯನ್ನು ಮತ್ತು ಖಾತರ್ ಜಾಮೀನಿಯನ್ನು ಸಹಾ ಕೊಡಬೇಕು; ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕೆ ತಪ್ಪಿದಾಗ್ಯೂ ಸದರೀ ಬಾಬುಗಳು ಪುನಃ ಹರಾಜ್ ಮಾಡಲ್ಪಡುವದು. ಲುಕ್ಸಾನ್ ಮೊಬಲಗು ತಪ್ಪಿದ ಛಡಸವಾಲ್‌ದಾರನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

ಈ ಹರಾಜ್ ವಿಷಯದಲ್ಲಿ ಇನ್ನು ಯೇನಾದರು ಹೆಚ್ಚು ತಪಶೀಲು ತಿಳದುಕೊಳ್ಳಲು ಅಪೇಕ್ಷೈವುಳ್ಳವರು ಅಮಿಾಲರಿಂದ ತಿಳದುಕೊಳ್ಳಬಹುದು.

ಜೆ. ರಘುನಾಥ ರಾವ್,
ಫಾರ್ ಡೆ॥ ಕಮ್ಮಿಷನರ್.

ತುಮಕೂರು ಡಿಸ್ಟ್ರಿಕ್ಟು ಸಬಾರ್ಡಿನೇಟ್ ಜಡ್ಜ್‌ರ್‌ಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಕೀರಾ ತಾ॥ ಹಂದಿಕುಂಟೆಯಲ್ಲಿರುವ ಶಾನುಭೋಗ ವೆಂಕಟ್ರಾಮಯ್ಯನ ವಿಷಯದಲ್ಲಿ—

ಸ್ ೯ 1884ನೇ ಇಸವಿ ದಿವಾಳಿ ವ್ಯಾಜ್ಯ ನಂಬರು 3.

ಹುಕ್ಕುಂ.

ಮೇಲ್ಕಂಡ ಶಾನುಭೋಗ ವೆಂಕಟ್ರಾಮಯ್ಯ ಖುಲಾಸೆಯಾಗಬೇಕೆಂದು ಕೋರಿ ಬರದುಕ್ಕೊಂಡ ಅರ್ಜಿಯು ಮೆಸ್ಟರ್ ಸಿ. ಕೈಸ್ ಸಾಹೇಬರ ರೂಬರೂ ಅರ್ಜಿದಾರನ ಪರವಾಗಿ ಇವನ ಸಮಕ್ಷಮದಲ್ಲಿಯೂ ಮತ್ತು ಅರ್ಜ ಅರ್ಜಿದಾರನ ಲೇಣೇದಾರರಾದವರ ಪೈಕಿ ಕೀರಾ ತಾಲ್ಲೂಕು ಕಲ್ಲಪಳ್ಳಿ ಮದ್ದೇಗವುಡನ ಯದುರಾಗಿಯೂ ದರ್ಯಾಫ್ತೀ ಮಾಡಲ್ಪಟ್ಟಿತು.